# ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲ-571440

ದಿನಾಂಕ : 03-02-2018

## ಪ್ರಕಟಣೆಯ ಕೃಪೆಗಾಗಿ

### ಸ್ವಚ್ಛತಾ ವಿಷಯ ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು

### ಜೆಎಸ್‌ಎಸ್ ಮಹಿಳಾ ಕಾಲೇಜಿನ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಪ್ರೊ. ಉಮೇಶ

**ಕೊಳ್ಳೇಗಾಲ 03-02-2018 :** ಸ್ವಚ್ಛತಾ ವಿಷಯದಲ್ಲಿ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಶಿಕ್ಷಣ ನೀಡುವಂತಾಗಬೇಕು. ದೇಶದ ಜನತೆಯು ಸ್ವಚ್ಛತೆಯಿಂದ ಇಡೀ ದೇಶವನ್ನು ಆರೋಗ್ಯವಂತ ವಾಗಿಡಬಹುದಾಗಿದ್ದು ತನ್ಮೂಲಕ ಸಧೃಡ ದೇಶ ನಿರ್ಮಾಣ ಸಾಧ್ಯ. ದೇಶದಲ್ಲಿ ಪ್ರಸ್ತುತ ಜನಸಂಖ್ಯೆಯಲ್ಲಿ ಯುವ ಸಮೂಹ ಪ್ರಮಾಣ ಶೇಕಡ **50**ಕ್ಕಿಂತಲೂ ಹೆಚ್ಚಿರುವುದರಿಂದ ಸ್ವಚ್ಛತಾ ವಿಷಯವನ್ನು ಪ್ರಾಥಮಿಕ ಶಾಲೆಯಿಂದಲೂ ಕಡ್ಡಾಯವಾಗಿ ಬೋಧಿಸುವಂತಾಗಬೇಕು ಎಂದು ಪ್ರಾಚಾರ್ಯ ಪ್ರೊ. ಉಮೇಶ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾ.ಸೇ.ಯೋ. ಘಟಕ ಹಾಗೂ ಸ್ವಚ್ಚತಾ ಸಮಿತಿಯು ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ್ದ ಸಾಪ್ತಾಹಿಕ ಕ್ಯಾಂಪಸ್ ಸ್ವಚ್ಛತಾ ಕಾರ್ಯಕ್ರಮವನ್ನು ಚಾಲನೆ ನೀಡಿ ಮಾತನಾಡಿದರು.

ಕಳೆದ 70 ವರ್ಷಗಳಲ್ಲಿ ಪ್ರಗತಿಯ ಹಾದಿಯಲ್ಲಿ ನಾವು ಬಹಳ ದೂರ ಸಾಗಿದ್ದರೂ ಸ್ವಚ್ಛತೆಯ ವಿಷಯದಲ್ಲಿ ಕೊರತೆಯಿರುವುದು ಕಟು ಸತ್ಯ. ಸ್ವಚ್ಛತೆ ಹಾಗೂ ನೈರ್ಮಲ್ಯ ಕೊರತೆ ನಿಜಕ್ಕೂ ಭವಿಷ್ಯದ ಪ್ರತಿಭೆಗಳಾದ ಯುವ ಸಮೂಹವನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಕುಗ್ಗಿಸಿ ಬಿಡುತ್ತದೆ. ಸ್ವಚ್ಛ ಕೌಶಲ್ಯಪೂರ್ಣ, ಸುಶಿಕ್ಷಿತ, ಆರೋಗ್ಯವಂತ ನವಭಾರತದ ಕನಸನ್ನು ಹೊಂದಿ ಅದನ್ನು ನನಸು ಮಾಡುವ ದಿಕ್ಕಿನತ್ತ ಯುವ ಶಕ್ತಿಯು ಚಿಂತಿಸಬೇಕಾದರೆ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ಸ್ವಚ್ಛತೆಯ ವಿಷಯವನ್ನು ಅಭ್ಯಸಿಸುವಂತಾಗಬೇಕು ಎಂದು ಕರೆ ನೀಡಿದರು.

ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಸ್ವಚ್ಛತಾ ಕಾರ್ಯ ನಡೆಸಿಕೊಟ್ಟರು, ಸ್ವಚ್ಛತಾ ಸಮಿತಿ ಸಂಚಾಲಕ ಶ್ರೀ ಬಿ. ಮಂಜುನಾಥ್, ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಸಾಪ್ತಾಹಿಕ ಕ್ಯಾಂಪಸ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ತೊಡಗಿರುವ ವಿದ್ಯಾರ್ಥಿನಿಯರು



ಸಾಪ್ತಾಹಿಕ ಕ್ಯಾಂಪಸ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ತೊಡಗಿರುವ ವಿದ್ಯಾರ್ಥಿನಿಯರು

